ಕರ್ನಾಟಕ ಸರಕಾರ

# ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

**" ಅಭಿವೃದ್ಧಿ ಭವನ "** ಐವಾನ-ಎ-ಶಾಹಿ, ಕಲಬುರಗಿ - 585 102
ದೂರವಾಣಿ : (08472) - 256767, 239556, 223606 - ಫ್ಯಾಕ್ಸ : (08472) 227527
E-mail : hkadbgulb@gmail.com, hkrdbklb@gmail.com Website : hkrdb.kar.nic.in

ಸಂಖ್ಯೆ:ಹೈ.ಕ.ಪ್ರ.ಅ.ಮಂ/ಯೋಶಾ/ಮ್ಯಾಕ್ರೋ/46/2017-18/2810 ದಿನಾಂಕ: 22-12-2017 23

**ತಿದ್ದುಪಡಿ**

ವಿಷಯ: "ಗ್ರಾಮ ವಿಕಾಸ ಯೋಜನೆ"ಯ ಅನುಷ್ಠಾನದ ಬಗ್ಗೆ.

ಉಲ್ಲೇಖ: ಮಂಡಳಿಯ ಸುತ್ತೋಲೆ ಸಂಖ್ಯೆ: ಹೈ.ಕ.ಪ್ರ.ಅ.ಮಂ/ಯೋಶಾ/ಮ್ಯಾಕ್ರೋ/46/2017-18/1089 ದಿನಾಂಕ:31-07-2017

*****

ಹೈದ್ರಾಬಾದ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ 2017-18ನೇ ಸಾಲಿನಲ್ಲಿ ಮ್ಯಾಕ್ರೋ ಯೋಜನೆಯಡಿಯಲ್ಲಿ ಗ್ರಾಮಗಳ ಆಂತರಿಕ ರಸ್ತೆ ಅಭಿವೃದ್ಧಿ ಕಾರ್ಯವನ್ನು "ಗ್ರಾಮ ವಿಕಾಸ ಯೋಜನೆ" ಮಾದರಿಯಲ್ಲಿ ಕಾರ್ಯಗತಗೊಳಿಸಲು ಗ್ರಾಮ ವಿಕಾಸ ಯೋಜನೆಯ ಮಾರ್ಗಸೂಚಿಗಳಲ್ಲಿ ಕೆಲವು ಬದಲಾವಣೆ ಮಾಡಿ ಅನುಷ್ಠಾನಗೊಳಿಸಲು ಆದೇಶಿಸಿಲಾಗಿರುತ್ತದೆ. ಸದರಿ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ 2 ರಲ್ಲಿ **"ತಾಂತ್ರಿಕ ನೋಡಲ್ ಏಜನ್ಸಿ – ಆಡಳಿತಾತ್ಮಕ ಮಂಜೂರಾತಿ ಪೂರ್ವದಲ್ಲಿ ಹೈ.ಕ.ಪ್ರಮಂಡಳಿಯ ತಾಂತ್ರಿಕ ನೋಡಲ ಏಜೆನ್ಸಿಯಾದ ಪೂಜ್ಯ ದೊಡ್ಡಪ್ಪ ಅಪ್ಪ (ಪಿ.ಡಿ.ಎ.) ಇಂಜನಿಯರಿಂಗ ಕಾಲೇಜ್ ಇವರಿಂದ ಡಿ.ಪಿ.ಆರ್.ನ್ನು ತಾಂತ್ರಿಕ ಪರಿಶೀಲನೆಗೊಳಪಡಿಸತಕ್ಕದ್ದು"** ಎಂದು ತಿಳಿಸಲಾಗಿರುತ್ತದೆ.

ಆದರೆ ಗ್ರಾಮ ವಿಕಾಸ ಯೋಜನೆಯ ಮಾದರಿಯಲ್ಲಿ ಗ್ರಾಮಗಳ ಆಂತರಿಕ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿರುವುದರಿಂದ ಸದರಿ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ 2 ರಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಸದರಿ ಕಾಮಗಾರಿಗಳಿಗೆ ತಾಂತ್ರಿಕ ನೋಡಲ್ ಏಜನ್ಸಿ- ಪಿ.ಡಿ.ಎ. ಇಂಜನಿಯರಿಂಗ ಕಾಲೇಜು ಇವರಿಂದ ತಾಂತ್ರಿಕ ಪರಿಶೀಲನೆ ಅವಶ್ಯಕತೆ ಇಲ್ಲದೇ ಇರುವುದು ತಿಳಿದು ಬಂದಿರುವುದರಿಂದ ಅದನ್ನು ಕೈಬಿಡಲು ತಿದ್ದುಪಡಿ ಮಾಡಿ ಆದೇಶಿಸಿಲಾಗಿದೆ.

ತಮ್ಮ ವಿಶ್ವಾಸಿ,

ಕಾರ್ಯದರ್ಶಿಗಳು,
ಹೈ.ಕ.ಪ್ರ.ಅ.ಮಂಡಳಿ, ಕಲಬುರಗಿ

ಇವರಿಗೆ

1. ಎಲ್ಲಾ ಜಿಲ್ಲಾಧಿಕಾರಿಗಳು, ಹೈ.ಕ. ವಿಭಾಗ
2. ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಯತ್, ಹೈ.ಕ.ವಿಭಾಗ
3. ಎಲ್ಲಾ ಅನುಷ್ಠಾನಾಧಿಕಾರಿಗಳು, ಹೈ.ಕ.ವಿಭಾಗ